**All India Radio: Bangalore**
**National Bulletin In Kannada**
**30.07.2025 19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**30.07.2025 19.35 p.m.**

**<><><><>**

ಮುಖ್ಯಾಂಶಗಳು

- ರಾಜ್ಯಸಭೆಯಲ್ಲಿ ಆಪರೇಷನ್ ಸಿಂದೂರ್ ಕುರಿತು ಚರ್ಚೆ ಮುಂದುವರಿಕೆ ; ವಿದೇಶಿ ಮಧ್ಯಸ್ಥಿಕೆ ತಳ್ಳಿ ಹಾಕಿದ ಸಚಿವ ಡಾ. ಎಸ್. ಜೈಶಂಕರ್
- ಶ್ರೀಹರಿ ಕೋಟಾದಿಂದ ನಿಸಾರ್ ಉಪಗ್ರಹ ಯಶಸ್ವಿ ಉಡಾವಣೆ ; ಪ್ರತಿ ೧೨ ದಿನಗಳಿಗೊಮ್ಮೆ ಭೂ ಚಿತ್ರಣ ರವಾನೆ
- ಆಗಸ್ಟ್ ೧ ರಿಂದ ಜಾರಿಗೆ ಬರುವಂತೆ ಭಾರತೀಯ ಆಮದು ಉತ್ಪನ್ನಗಳ ಮೇಲೆ ದಂಡ ಸಹಿತ ಶೇಕಡ ೨೫ರಷ್ಟು ಸುಂಕ ವಿಧಿಸಿ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಘೋಷಣೆ
- ರಷ್ಯಾ ಕರಾವಳಿಯಲ್ಲಿ ಭಾರೀ ಭೂಕಂಪನ ; ಹಲವು ದೇಶಗಳಿಗೆ ತೀವ್ರ ಎಚ್ಚರಿಕೆ ಸೂಚನೆ; ಫಿಲಿಪೈನ್ಸ್, ಜಪಾನ್‌ನ ಕೆಲವೆಡೆ ಎಚ್ಚರಿಕೆ ಹಿಂಪಡೆತ

<><><><>

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ಕೈಗೊಂಡ ಯಶಸ್ವಿ ಹಾಗೂ ನಿರ್ಣಾಯಕ ಕಾರ್ಯಾಚರಣೆಯಾದ ಆಪರೇಷನ್ ಸಿಂದೂರ್ ಕುರಿತು ರಾಜ್ಯಸಭೆಯಲ್ಲಿಂದು ಚರ್ಚೆ ಮುಂದುವರೆಯಿತು. ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್, ಇತರ ರಾಷ್ಟ್ರಗಳ ಮಧ್ಯಸ್ಥಿಕೆ ಕುರಿತ ಹೇಳಿಕೆಗಳನ್ನು ತಳ್ಳಿಹಾಕಿದರು. ಹಾಗೂ ಏಪ್ರಿಲ್ ೨೨ರಿಂದ ಜೂನ್ ೧೭ರವರೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ನಡುವೆ ಯಾವುದೇ ಕರೆ ನಡೆಯಲಿಲ್ಲ ಹಾಗೂ ಯಾವುದೇ ಜಾಗತಿಕ ನಾಯಕರು ಭಾರತವನ್ನು ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಆಗ್ರಹಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಆಪರೇಷನ್ ಸಿಂದೂರ್‌ನಿಂದಾಗಿ ಭಯೋತ್ಪಾದಕ ಕೇಂದ್ರಗಳಿಗೆ ಭಾರೀ ಹಾನಿಯಾಗಿದ್ದು, ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದರು. ಪಾಕಿಸ್ತಾನ ಭಯೋತ್ಪಾದನೆಗೆ ಬೆಂಬಲ ಸೂಚಿಸುವುದನ್ನು ನಿಲ್ಲಿಸುವವರೆಗೆ ಸಿಂಧು ಜಲ ಒಪ್ಪಂದವನ್ನು ಸ್ಥಗಿತಗೊಳಿಸಲು ಭದ್ರತೆ ಕುರಿತ

ಸಚಿವ ಸಂಪುಟ ಸಮಿತಿ ತೀರ್ಮಾನಿಸಿತು ಎಂದು ಹೇಳಿದರು. ಭಾರತ ಪರಮಾಣು ಬೆದರಿಕೆ ಅಥವಾ ಜಾಗತಿಕ ಮಧ್ಯಸ್ಥಿಕೆ ಎರಡನ್ನೂ ಸ್ವೀಕರಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದ ಅವರು, ಪಹಲ್ಗಾಮ್ ದಾಳಿ ಹಿಂದಿನ ದಿ ರೆಸಿಸ್ಟೆನ್ಸ್ ಫ್ರಂಟ್ ಪಿಆರ್‌ಎಫ್ ಅನ್ನು ಅಮೆರಿಕ ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿರುವುದಾಗಿ ರಾಜ್ಯಸಭೆಗೆ ಮಾಹಿತಿ ನೀಡಿದರು. ಬಳಿಕ ಮಾತನಾಡಿದ ಸಭಾ ನಾಯಕ ಜೆ.ಪಿ. ನಡ್ಡಾ, ಪಹಲ್ಗಾಮ್ ದಾಳಿಯನ್ನು ಖಂಡಿಸಿ ಅಮಿತ್ ಶಾ ಅವರ ಶ್ರೀನಗರ ಭೇಟಿ, ಪ್ರಧಾನಿ ಅವರು ಸೌಧಿ ಅರೇಬಿಯಾ ಪ್ರವಾಸ ಅರ್ಧಕ್ಕೆ ಮೊಟಕುಗೊಳಿಸಿ ಹಿಂದಿರುಗಿದ್ದು, ಸೇರಿದಂತೆ ಸರ್ಕಾರ ಕೈಗೊಂಡಿರುವ ತ್ವರಿತ ಕ್ರಮಗಳ ಕುರಿತು ವಿವರಿಸಿದರು. ಇದರ ಜೊತೆಗೆ ಡಿಎಂಕೆಯ ಎನ್.ಆರ್. ಎಲಾಂಗೊ, ಟಿಎಂಸಿಯ ಡೋಲಾ ಸೇನ್, ಆರ್‌ಜೆಡಿಯ ಮನೋಜ್ ಜಾ, ಕಾಂಗ್ರೆಸ್‌ನ ಅಖಿಲೇಶ್ ಪ್ರಸಾದ್ ಸಿಂಗ್ ಸೇರಿದಂತೆ ಹಲವು ಸಂಸದರು ಆಪರೇಷನ್ ಸಿಂದೂರ್ ಹಾಗೂ ಪಹಲ್ಗಾಮ್ ದಾಳಿ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು ಭಯೋತ್ಪಾದನೆ ವಿರುದ್ಧ ಕಠಿಣಕ್ರಮಕ್ಕೆ ಆಗ್ರಹಿಸಿದರು.

<><><><>

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಆಗಸ್ಟ್ ೧೩ರಿಂದ ಜಾರಿಗೆ ಬರುವಂತೆ ೬ ತಿಂಗಳ ಕಾಲ ವಿಸ್ತರಿಸುವ ಕುರಿತ ನಿರ್ಣಯವನ್ನು ಇಂದು ಲೋಕಸಭೆ ಅಂಗೀಕರಿಸಿದೆ. ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯ ವಿಸ್ತರಣೆ ಕುರಿತ ನಿರ್ಣಯವನ್ನು ಗೃಹ ವ್ಯವಹಾರಗಳ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, ಮಂಡಿಸಿದರು. ಮಣಿಪುರದಲ್ಲಿ ಕಳೆದ ಫೆಬ್ರವರಿ ೧೩ರಂದು ರಾಷ್ಟ್ರಪತಿಯವರ ಆಡಳಿತ ಜಾರಿಗೊಂಡಿತ್ತು. ಅದನ್ನು ಮುಂದುವರೆಸಲು ಸದನದ ಅನುಮೋದನೆ ಕೋರಿ ಅವರು ನಿರ್ಣಯ ಮಂಡಿಸಿದರು. ಚರ್ಚೆಯನ್ನು ಆರಂಭಿಸಿದ ಕಾಂಗ್ರೆಸ್ ಸದಸ್ಯ ಆಂಟೋ ಆಂಟೋನಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಾಗಿ ಪ್ರಸ್ತಾಪಿಸಿ ಆಡಳಿತ ಸಂಪೂರ್ಣ ಕುಸಿತಗೊಂಡಿದೆ ಎಂದರು. ಎಸ್‌ಪಿ ಪಕ್ಷದ ಲಾಲ್‌ಜಿ ವರ್ಮಾ, ರಾಷ್ಟ್ರಪತಿ ಆಡಳಿತ ಜಾರಿಗೆ ಬಂದ ನಂತರವೂ ರಾಜ್ಯದಲ್ಲಿ ಸ್ಥಿತಿಗತಿ ಸುಧಾರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಉತ್ತರವಾಗಿ ಸಚಿವ ನಿತ್ಯಾನಂದ ರೈ ಕಳೆದ ೮ ವರ್ಷಗಳಲ್ಲಿ ೧ ಹಿಂಸಾತ್ಮಕ ಘಟನೆಯಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿದ ಘಟನೆ ಮಾತ್ರ ನಡೆದಿದೆ ಹಾಗೂ ಕಳೆದ ೪ ತಿಂಗಳಲ್ಲಿ

ಒಂದು ಹಿಂಸಾತ್ಮಕ ಘಟನೆ ಮಣಿಪುರದಲ್ಲಿ ವರದಿಯಾಗಿಲ್ಲ ಎಂದು ತಿಳಿಸಿದರು. ಸದನ ನಿರ್ಣಯವನ್ನು ಅಂಗೀಕರಿಸಿದ ನಂತರ ಕಲಾಪವನ್ನು ದಿನದಮಟ್ಟಿಗೆ ಮುಂದೂಡಲಾಗಿದೆ.

<><><><>

ಪ್ರಸ್ತುತ ದೇಶದಲ್ಲಿ ೫೮೫ ಆಕಾಶವಾಣಿ ಎಫ್‌ಎಂ ಕೇಂದ್ರಗಳು ಮತ್ತು ೩೮೮ ಖಾಸಗಿ ಎಫ್‌ಎಂ ರೇಡಿಯೋ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಸರ್ಕಾರ ತಿಳಿಸಿದೆ. ಲೋಕಸಭೆಯಲ್ಲಿಂದು ಲಿಖಿತ ಉತ್ತರ ನೀಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್, ಕಳೆದ ವರ್ಷ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರ ೨೩೪ ಸೇವೆ ತಲುಪದಿರುವ ಹೊಸ ನಗರಗಳಿಗೆ ಜಮ್ಮು-ಕಾಶ್ಮೀರದ ೩ ವಾಹಿನಿಗಳು ಸೇರಿದಂತೆ ಒಟ್ಟು ೭೩೦ ಖಾಸಗಿ ಎಫ್‌ಎಂ ವಾಹಿನಿಗಳ ಇ-ಹರಾಜಿಗೆ ಅನುಮೋದನೆ ನೀಡಿತ್ತು. ಈ ಹೊಸ ಎಫ್‌ಎಂ ವಾಹಿನಿಗಳಿಗೆ ವಾರ್ಷಿಕ ಪರವಾನಿಗೆ ಶುಲ್ಕವನ್ನು ಒಟ್ಟು ಆದಾಯದ ಶೇಕಡ ೪ರಷ್ಟು ಪ್ರಮಾಣದಲ್ಲಿ ವಿಧಿಸಲಾಗುವುದು. ಈಶಾನ್ಯ ರಾಜ್ಯಗಳು ಮತ್ತು ಜಮ್ಮು-ಕಾಶ್ಮೀರದಲ್ಲಿ ಈ ದರ ಕಾರ್ಯ ನಿರ್ವಹಣೆಯ ಮೊದಲ ಮೂರು ವರ್ಷಗಳಿಗೆ ಶೇಕಡ ೨ರಷ್ಟಿರಲಿದೆ ಎಂದು ಸಚಿವರು ಮಾಹಿತಿ ನೀಡಿದರು.

<><><><>

ಆಂಧ್ರಪ್ರದೇಶದ ಶ್ರೀಹರಿ ಕೋಟಾದಲ್ಲಿರುವ ಸತೀಶ್ ದವನ್ ಬಾಹ್ಯಾಕಾಶ ಕೇಂದ್ರದಿಂದ ಜಿಎಸ್‌ಎಲ್‌ವಿ-ಎಫ್೧೬ ರಾಕೆಟ್ ಮೂಲಕ ಸಿಂಥೆಟಿಕ್ ಅಪರ್ಚರ್ ರೇಡಾರ್- ನಿಸಾರ್ ಎಂಬ ವಿಶಿಷ್ಟ ಭೂ ವೀಕ್ಷಣಾ ಉಪಗ್ರಹವನ್ನು ಇಂದು ಸಂಜೆ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಿಸಿದೆ. ನಿಸಾರ್, ನಾಸಾ ಮತ್ತು ಇಸ್ರೋ ಜಂಟಿಯಾಗಿ ನಡೆಸುತ್ತಿರುವ ಭೂವಿಜ್ಞಾನ ಯೋಜನೆಯಾಗಿದ್ದು, ನಿಸಾರ್ ಉಪಗ್ರಹ ಪ್ರತಿ ೧೨ ನಿಮಿಷಗಳಿಗೊಮ್ಮೆ ಭೂಮಿಯ ಭೂಭಾಗ, ಹಿಮಾಚ್ಛಾದಿತ ಪ್ರದೇಶಗಳು, ದ್ವೀಪಗಳು, ಹಾಗೂ ಆಯ್ದ ಸಮುದ್ರ ಭಾಗಗಳ ಚಿತ್ರಣ ನೀಡಲಿದೆ. ಇದರಿಂದಾಗಿ ಭೂಚಲನೆ, ಹಿಮಪಾತ, ಹಿಮನದಿಗಳ ಹರಿವು, ಸಮುದ್ರ ಮಟ್ಟದ ಏರಿಕೆ ಸೇರಿದಂತೆ ವಿವಿಧ ನೈಸರ್ಗಿಕ ಬದಲಾವಣೆಗಳನ್ನು ಅಧ್ಯಯನ ಮಾಡಲು ಸಾಧ್ಯವಾಗಲಿದೆ.

<><><><>

ಆಗಸ್ಟ್ ೧ ರಿಂದ ಜಾರಿಗೆ ಬರುವಂತೆ ಭಾರತದಿಂದ ಆಮದಾಗುವ ಉತ್ಪನ್ನಗಳ ಮೇಲೆ ದಂಡ ಸಹಿತ ಶೇಕಡ ೨೫ರಷ್ಟು ಸುಂಕ ವಿಧಿಸಿ ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ವೇದಿಕೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಭಾರತ, ರಷ್ಯಾದಿಂದ ಮಿಲಿಟರಿ ಸಲಕರಣೆ ಮತ್ತು ಇಂಧನ ಖರೀದಿಸಿದಕ್ಕಾಗಿ ಈ ದಂಡ ವಿಧಿಸಲಾಗಿದೆ. ಭಾರತ ವಿಶ್ವದಲ್ಲೇ ಅತಿ ಹೆಚ್ಚಿನ ಶುಲ್ಕ ವಿಧಿಸುವ ದೇಶಗಳಲ್ಲಿ ಒಂದಾಗಿದ್ದು, ಹಣಕಾಸೇತರ ವ್ಯಾಪಾರ ಮಾರುಕಟ್ಟೆಗಳಲ್ಲಿ ಅತ್ಯಂತ ಕಠಿಣ ನಿಯಮಗಳನ್ನು ಹೊಂದಿದೆ ಎಂದು ಹೇಳಿದ್ದಾರೆ. ಭಾರತ ಮಿತ್ರರಾಷ್ಟ್ರವಾಗಿದೆ, ಆದರೂ ಇತ್ತೀಚಿನ ವರ್ಷಗಳಲ್ಲಿ ಅದರೊಂದಿಗೆ ಹೆಚ್ಚಿನ ಶುಲ್ಕಗಳ ಹಿನ್ನೆಲೆ ಕಡಿಮೆ ವ್ಯಾಪಾರ ವಹಿವಾಟು ನಡೆಸಲಾಗಿದೆ. ರಷ್ಯಾ, ಉಕ್ರೇನ್ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿಯೂ ಭಾರತ ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ಇಂಧನ ಖರೀದಿಯನ್ನು ಮುಂದುವರಿಸಿದೆ. ರಷ್ಯಾ, ಉಕ್ರೇನ್‌ನಲ್ಲಿ ದಾಳಿ ನಿಲ್ಲಿಸುವಂತೆ ಎಲ್ಲರೂ ಬಯಸುತ್ತಿರುವ ಸಂದರ್ಭದಲ್ಲಿ ಈ ನಡೆ ತರವಲ್ಲ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ.

<><><><>

ರಷ್ಯಾದ ಕಡಲ ತೀರದ ಬಳಿ ೮.೮ ತೀವ್ರತೆಯ ಭೂಕಂಪನ ಸಂಭವಿಸಿದ ಬೆನ್ನಲ್ಲೇ, ರಷ್ಯಾ, ಜಪಾನ್ ಹಾಗೂ ಅಮೆರಿಕದ ಹವಾಯಿ ದ್ವೀಪಗಳಿಗೆ ಸುನಾಮಿ ಅಲೆಗಳು ತಲುಪಿವೆ. ಈ ಭೂಕಂಪದ ನಂತರ ಪೆಸಿಫಿಕ್ ಸಾಗರದಾದ್ಯಂತ ಭಾರೀ ಎಚ್ಚರಿಕೆಯ ಸೂಚನೆಗಳೊಂದಿಗೆ ಹಲವು ದೇಶಗಳಲ್ಲಿ ಸ್ಥಳಾಂತರ ಕಾರ್ಯ ನಡೆಯುತ್ತಿದೆ. ಹವಾಯಿಯಲ್ಲಿ ಭೂಕಂಪನದ ಕೆಲವೇ ಗಂಟೆಗಳಲ್ಲಿ ಸುನಾಮಿಯ ಮೊದಲ ಅಲೆಗಳು ತಲುಪಿದ್ದು, ಓಹು ದ್ವೀಪದ ತೀರದಲ್ಲಿ ೪ ಅಡಿ ಎತ್ತರದ ಅಲೆ ದಾಖಲಾಗಿದೆ. ಹವಾಯಿ ಗವರ್ನರ್ ಜೋಶ್ ಗ್ರೀನ್ ಅವರು ಈ ಅಲೆಗಳು ಇನ್ನೂ ಮುಂದುವರಿಯಬಹುದು ಎಂದು ಎಚ್ಚರಿಸಿದ್ದಾರೆ. ಜನರು ತಕ್ಷಣದ ಸೂಚನೆಗಳವರೆಗೆ ತೀವ್ರ ಸುನಾಮಿ ಪೀಡಿತ ಪ್ರದೇಶಗಳಿಂದ ದೂರವಿರುವಂತೆ ಮನವಿ ಮಾಡಿದ್ದಾರೆ. ಜಪಾನಿನ ಉತ್ತರ ಇವಾತೆ ಪ್ರಿಫೆಕ್ಚರ್‌ನಲ್ಲಿ ೪.೩ ಅಡಿ ಎತ್ತರದ ಅಲೆ ಅಪ್ಪಳಿಸಿದ್ದು, ೧೯ ಲಕ್ಷಕ್ಕೂ ಹೆಚ್ಚು ಜನರನ್ನು ಕಡಲ ತೀರ ಪ್ರದೇಶಗಳಿಂದ ಸ್ಥಳಾಂತರಗೊಳ್ಳುವಂತೆ ಸೂಚನೆ ನೀಡಲಾಗಿದೆ. ಜಪಾನ್ ಹವಾಮಾನ ಇಲಾಖೆಯು ಸುನಾಮಿ ಅಲೆಗಳ ಅಪಾಯ ಇನ್ನೂ ಒಂದು ದಿನವರೆಗೆ ಇರಲಿದೆ ಎಂದು ಮುನ್ಸೂಚನೆ ನೀಡಿದೆ. ರಷ್ಯಾದ ಸಖಲಿನ್ ಪ್ರಾಂತ್ಯದಲ್ಲಿ ಕೂಡ ತುರ್ತು ಕ್ರಮಗಳನ್ನು

ಕೈಗೊಳ್ಳಲಾಗಿದೆ. ಕುರಿಲ್ ದ್ವೀಪಗಳನ್ನು ಸಂಪೂರ್ಣ ಖಾಲಿ ಮಾಡಲಾಗಿದ್ದು, ಬಂದರು ಪಟ್ಟಣವೊಂದು ಅಲೆಗಳಿಂದ ಮುಳುಗಿದೆ. ಎಲ್ಲ ನಿವಾಸಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯ ಅಧಿಕಾರಿಗಳು ದೃಢಪಡಿಸಿದ್ದಾರೆ. ಅಮೆರಿಕದ ರಾಷ್ಟ್ರೀಯ ಹವಾಮಾನ ಸೇವೆಯ ಪ್ರಕಾರ ಸುನಾಮಿ ಅಲೆಗಳು ಕ್ಯಾಲಿಫೋರ್ನಿಯಾ ತೀರಕ್ಕೂ ತಲುಪಿವೆ. ಇಂಡೋನೇಷಿಯಾದ ಪಪುವಾ ಪ್ರದೇಶದ ಜಯಪುರಾ ನಗರ ವಿಕಾಸ ಘಟಕವು ಕಡಲ ತೀರದ ನಿವಾಸಿಗಳನ್ನು ಎಚ್ಚರಿಕೆಯಿಂದ ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿರುವ ಪ್ರದೇಶಗಳಿಗೆ ತೆರಳುವಂತೆ ಮನವಿ ಮಾಡಿದೆ. ಜಪಾನ್‌ನ ಫುಕುಶಿಮಾ, ಮಿಯಾಗಿ ಹಾಗೂ ಇವಾತೆ ಪ್ರದೇಶಗಳಲ್ಲಿ ೩ ಮೀಟರ್ ಎತ್ತರದ ಅಲೆಗಳ ಮುನ್ಸೂಚನೆ ನೀಡಲಾಗಿದೆ. ಹವಾಯಿ ಮತ್ತು ರಷ್ಯಾದ ಕೆಲವು ಭಾಗಗಳಲ್ಲಿ ನೀರಿನ ಸರಬರಾಜು ಮತ್ತು ವಿದ್ಯುತ್ ವ್ಯವಸ್ಥೆಗೂ ತೊಂದರೆ ಉಂಟಾಗಿದೆ. ಮೌಯಿ ದ್ವೀಪದಲ್ಲಿ ನೀರು ಮತ್ತು ಕೊಳಚೆ ನೀರಿನ ವ್ಯವಸ್ಥೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅಮೆರಿಕ ಕರಾವಳಿ ಪಡೆ ಎಲ್ಲಾ ಹವಾಯಿ ಬಂದರುಗಳನ್ನು ಮುಚ್ಚಿದ್ದು, ಕೆಲವೊಂದು ವಿಮಾನಗಳ ಮಾರ್ಗವನ್ನು ಬದಲಾಯಿಸಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜನರನ್ನು ಸ್ಥಳೀಯ ಅಧಿಕಾರಿಗಳ ಸೂಚನೆಗಳನ್ನು ಅನುಸರಿಸಲು ಹಾಗೂ ಎಚ್ಚರಿಕೆಯಿಂದಿರಲು ಕರೆ ನೀಡಿದ್ದಾರೆ. ಚೀನಾ, ಇಂಡೋನೇಷಿಯಾ, ನ್ಯೂಝಿಲೆಂಡ್, ಪೆರು ಮತ್ತು ಎಕ್ವಡಾರ್‌ನ ಗ್ಯಾಲಾಪಾಗೋಸ್ ದ್ವೀಪಗಳು ಸಹಿತ ಹಲವು ದೇಶಗಳು ಸುನಾಮಿ ಎಚ್ಚರಿಕೆ ನೀಡಿವೆ. ಈ ನಡುವೆ ಫಿಲಿಪೈನ್ಸ್ ಅದರ ಕೆಲವು ಕರಾವಳಿ ಪ್ರದೇಶಗಳಲ್ಲಿ ಸುನಾಮಿ ಎಚ್ಚರಿಕೆಗಳನ್ನು ಹಿಂತೆಗೆದುಕೊಂಡಿದೆ. ಜಪಾನ್ ಕ್ಯಾಂಟೋದಿಂದ ವಕಯಾಮವರೆಗೆ ಸುನಾಮಿ ಎಚ್ಚರಿಕೆಗಳನ್ನು ಇಳಿಸಿದೆ. ಆದರೆ ಹೊಕ್ಕೈಡೊ ಮತ್ತು ತೊಹೊಕುದಲ್ಲಿ ತೀವ್ರ ಎಚ್ಚರಿಕೆ ಸೂಚನೆ ಮುಂದುವರೆದಿದೆ. ಇದು ಇತ್ತೀಚಿನ ಇತಿಹಾಸದಲ್ಲಿಯೇ ಅತ್ಯಂತ ಭೀಕರ ಭೂಕಂಪಗಳಲ್ಲಿ ಒಂದು ಎಂದು ವಿಶ್ಲೇಷಿಸಲಾಗಿದೆ. ಪೆಸಿಫಿಕ್ ಸಾಗರದ ತೀರದ ಜನರಿಗೆ ಸುರಕ್ಷಿತ ಪ್ರದೇಶಗಳಲ್ಲಿ ಇರುವಂತೆ ಹಾಗೂ ಅಧಿಕೃತ ಮಾಹಿತಿಯನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ. ಈ ಸಂದರ್ಭದಲ್ಲಿ, ಅಮೆರಿಕದಲ್ಲಿರುವ ಭಾರತೀಯ ನಾಗರಿಕರಿಗೆ ಸಂಫ್ರಾನ್ಸಿಸ್ಕೋದಲ್ಲಿನ ಭಾರತೀಯ ದೂತಾವಾಸ ಕಚೇರಿ ಸ್ಥಳೀಯ ಸುಚನೆಗಳನ್ನು ಗಮನವಿಟ್ಟು ಅನುಸರಿಸುವಂತೆ ಮನವಿ ಮಾಡಿದೆ. ತುರ್ತು

ಪರಿಸ್ಥಿತಿಯಲ್ಲಿ +೧-೪೧೫-೪೮೩-೬೬೨೯ ಗೆ ಕರೆ ಮಾಡಲು ಅಥವಾ enquiry.sf@mea.gov.in ಗೆ ಇಮೇಲ್ ಮೂಲಕ ಸಂಪರ್ಕಿಸಲು ಸೂಚಿಸಲಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>